ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರವರ ಕಛೇರಿ, ನರಸಿಂಹರಾಜ.ವೃತ್ತ, ಬೆಂಗಳೂರು – 560 002**

ಸಂಖ್ಯೆ: ಅ.ನಿ.ನ.ಯೋ/ಪಿಆರ್/4330/14–15 ದಿನಾಂಕ: 26-02-2015

**ಸುತ್ತೋಲೆ**

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಸತಿ / ವಸತಿಯೇತರ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ / ಪರವಾನಗಿ, ಪ್ರಾರಂಭಿಕ ಪ್ರಮಾಣಪತ್ರ ಹಾಗೂ ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಬಗ್ಗೆ ಮಾರ್ಗಸೂಚಿಗಳು

ಉಲ್ಲೇಖ: 1) ಕಛೇರಿ ಆದೇಶ ಸಂಖ್ಯೆ: ಬಿ12(1)/ಪಿಆರ್/394/2012–13, ದಿನಾಂಕ: 01–01–2013
2) ಕಛೇರಿ ಆದೇಶ ಸಂಖ್ಯೆ: ಬಿ12(1)/ಪಿಆರ್/394/2012–13, ದಿನಾಂಕ: 12–03–2013

* * * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿ, ವಲಯ ಕಛೇರಿಗಳು ಹಾಗೂ ಉಪ ವಿಭಾಗೀಯ ಕಛೇರಿಗಳ ವ್ಯಾಪ್ತಿಯಲ್ಲಿ ನಿರ್ಮಿಸಲ್ಪಡುವ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ / ಪರವಾನಗಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಬಗ್ಗೆ ಈಗಾಗಲೇ ಉಲ್ಲೇಖ (1) ಮತ್ತು (2) ರಲ್ಲಿ ಈ ಕೆಳಕಂಡಂತೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

| ಕ್ರಮ ಸಂಖ್ಯೆ | ವಸತಿ / ವಸತಿಯೇತರ ಕಟ್ಟಡಗಳ ವಿವರ | ಪರಿಶೀಲನೆ / ಶಿಫಾರಸ್ಸು ಮಾಡುವ ಅಧಿಕಾರ | ಅನುಮೋದನೆ ಅಧಿಕಾರ |
|---|---|---|---|
| 1 | 2400 ಚ.ಅಡಿ ವಿಸ್ತೀರ್ಣದ ವರೆಗಿನ ಏಕ ಘಟಕ ವಸತಿ ಕಟ್ಟಡಗಳಿಗೆ ಪರವಾನಗಿ / ನಕ್ಷೆ ಮಂಜೂರಾತಿ | ವಲಯ ವ್ಯಾಪ್ತಿಯಲ್ಲಿ ಬರುವ ಉಪ-ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರು ಮ್ಯಾನ್ಯುಯಲ್ ಪದ್ಧತಿಯಲ್ಲಿ ಮಂಡಿಸುವುದು. | ಉಪ ವಿಭಾಗೀಯ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು |
| 2 | ಸುವರ್ಣ ಪರವಾನಗಿ ಯೋಜನೆಯಡಿಯಲ್ಲಿ 4 ಘಟಕಗಳವರೆಗಿನ ವಸತಿ ಕಟ್ಟಡಗಳಿಗೆ ಪರವಾನಗಿ / ನಕ್ಷೆ ಮಂಜೂರಾತಿ 4000 ಚ.ಅಡಿ ವಿಸ್ತೀರ್ಣದವರೆಗೆ | ವಲಯ ಕಛೇರಿಗಳ ನಗರ ಯೋಜನಾ ಶಾಖೆಯಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರು (ಅಂತರ್ಜಾಲ ತಂತ್ರಾಂಶದ ಮುಖಾಂತರ ಮಾತ್ರ) | ವಲಯ ಕಛೇರಿಯ ಸಹಾಯಕ ನಿರ್ದೇಶಕರು (ನಗರ ಯೋಜನೆ) |
| 3 | ಒಂದು ತಳ + ನೆಲ + ಮೇಲಿನ 3 ಅಂತಸ್ತುಗಳಿಗೆ 15.00 ಮೀ. ಎತ್ತರ ಮೀರದಂತೆ, ವಿಸ್ತೀರ್ಣದ ಮಿತಿಯಿಲ್ಲದೇ ಎಲ್ಲಾ ವಸತಿ / ವಸತಿಯೇತರ ಕಟ್ಟಡಗಳಿಗೆ ಪರವಾನಗಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವುದು | ವಲಯ ಕಛೇರಿಗಳ ನಗರ ಯೋಜನಾ ಶಾಖೆಯಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರು, ಸಹಾಯಕ ನಿರ್ದೇಶಕರು (ನಗರ ಯೋಜನೆ), ಮುಖ್ಯ ಅಭಿಯಂತರರು | ವಲಯ ಕಛೇರಿಯ ಅಪರ ಆಯುಕ್ತರು / ಜಂಟಿ ಆಯುಕ್ತರು |
| 4 | ಒಂದು ತಳ ಅಥವಾ ಒಂದಕ್ಕಿಂತ ಹೆಚ್ಚಿನ ತಳ ಅಂತಸ್ತು + ನೆಲ + ಮೇಲಿನ 4 ಮತ್ತು ಹೆಚ್ಚಿನ ಅಂತಸ್ತುಗಳಿಗೆ ಎತ್ತರ ಹಾಗೂ ವಿಸ್ತೀರ್ಣದ ಮಿತಿಯಿಲ್ಲದೇ ಎಲ್ಲಾ ವಸತಿ / ವಸತಿಯೇತರ ಕಟ್ಟಡಗಳಿಗೆ ಪರವಾನಗಿ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವುದು. | ಕೇಂದ್ರ ಕಛೇರಿಯ ನಗರ ಯೋಜನಾ ಶಾಖೆಯಲ್ಲಿ ಕಾರ್ಯ ನಿರ್ವಹಿಸುವ ಕಿರಿಯ ಅಭಿಯಂತರರು / ಸಹಾಯಕ ಅಭಿಯಂತರರು, ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರು, ಜಂಟಿ ನಿರ್ದೇಶಕರು (ನಗರ | ಆಯುಕ್ತರು |

| | | | |
|---|---|---|---|
| | | ಯೋಜನೆ), ಅಪರ ನಿರ್ದೇಶಕರು (ನಗರ ಯೋಜನೆ) ಪ್ರಧಾನ ಅಭಿಯಂತರರು, ವಿಶೇಷ ಆಯುಕ್ತರು (ಯೋಜನೆ) | |
| 5 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ಎಲ್ಲಾ ವಸತಿ / ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗಳಿಗೆ ಕಟ್ಟಡ ನಕ್ಷೆ ಮಂಜೂರಾತಿ / ಪರವಾನಗಿ, ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವುದು. | ಕೇಂದ್ರ ಕಛೇರಿಯ ನಗರ ಯೋಜನಾ ಶಾಖೆಯಲ್ಲಿ ಕಾರ್ಯ ನಿರ್ವಹಿಸುವ ಕಿರಿಯ ಅಭಿಯಂತರರು / ಸಹಾಯಕ ಅಭಿಯಂತರರು, ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರು, ಜಂಟಿ ನಿರ್ದೇಶಕರು (ನಗರ ಯೋಜನೆ), ಅಪರ ನಿರ್ದೇಶಕರು (ನಗರ ಯೋಜನೆ) ಪ್ರಧಾನ ಅಭಿಯಂತರರು, ವಿಶೇಷ ಆಯುಕ್ತರು (ಯೋಜನೆ) | ಆಯುಕ್ತರು |
| 6 | ಒಂದು ತಳ ಅಥವಾ ಒಂದಕ್ಕಿಂತ ಹೆಚ್ಚಿನ ತಳ ಅಂತಸ್ತು + ನೆಲ + ಮೇಲಿನ 4 ಮತ್ತು ಹೆಚ್ಚಿನ ಅಂತಸ್ತುಗಳಿಗೆ ಎತ್ತರ ಹಾಗೂ ವಿಸ್ತೀರ್ಣದ ಮಿತಿಯಿಲ್ಲದೇ ಎಲ್ಲಾ ವಸತಿ / ವಸತಿಯೇತರ ಕಟ್ಟಡಗಳಿಗೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ವಸತಿ / ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ನೀಡುವುದು | ಕೇಂದ್ರ ಕಛೇರಿಯ ನಗರ ಯೋಜನಾ ಶಾಖೆಯಲ್ಲಿ ಕಾರ್ಯ ನಿರ್ವಹಿಸುವ ಕಿರಿಯ ಅಭಿಯಂತರರು / ಸಹಾಯಕ ಅಭಿಯಂತರರು, ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರು, ಜಂಟಿ ನಿರ್ದೇಶಕರು (ನಗರ ಯೋಜನೆ) | ಅಪರ ನಿರ್ದೇಶಕರು (ನಗರ ಯೋಜನೆ) |

ಮೇಲ್ಕಂಡಂತೆ ವಿವಿಧ ಹಂತಗಳಲ್ಲಿ ಅಧಿಕಾರ ಪ್ರತ್ಯಾಯೋಜನೆಯಾಗಿದ್ದರೂ ಸಹ ಕಟ್ಟಡ ನಕ್ಷೆ ಮಂಜೂರಾತಿ / ಪರವಾನಗಿ ನೀಡುವ ಹಂತದಲ್ಲಿ ವಿಶೇಷವಾಗಿ ಉಪ ವಿಭಾಗೀಯ ಕಛೇರಿಗಳ ಮಟ್ಟದಲ್ಲಿ ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿ ಮಂಜೂರಾತಿ / ಪರವಾನಗಿ ನೀಡುತ್ತಿರುವುದಾಗಿ ತಿಳಿದುಬಂದಿರುತ್ತದೆ. ಅಲ್ಲದೇ, ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿಯೂ ಸಹ ಈ ಬಗ್ಗೆ ಚರ್ಚೆ ನಡೆದಿದ್ದು, ಈ ಬಗ್ಗೆ ಅಗತ್ಯ ನಿರ್ದೇಶನ / ಮಾರ್ಗಸೂಚಿಗಳನ್ನು ಹೊರಡಿಸುವಂತೆ ನಿರ್ಣಯಿಸಲಾಗಿದೆ.

ಹಾಗಾಗಿ, ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಸದರಿ ಮಾರ್ಗಸೂಚಿಗಳನ್ನು ಅಧಿಕಾರ ಪ್ರತ್ಯಾಯೋಜನೆ ನೀಡಲಾಗಿರುವ ಎಲ್ಲಾ ಹಂತದ ಅಧಿಕಾರಿ / ಸಿಬ್ಬಂದಿಗಳು ಕಡ್ಡಾಯವಾಗಿ ಪಾಲಿಸಬೇಕೆಂದು ಈ ಮೂಲಕ ಆದೇಶಿಸಿದೆ. ಈ ಸುತ್ತೋಲೆ ಹೊರಡಿಸಿದ ನಂತರವೂ ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿ ಮಂಜೂರಾತಿ ನೀಡಿರುವ ಪ್ರಕರಣಗಳು ಕಂಡುಬಂದರೆ, ಅಂತಹ ಮಂಜೂರಾತಿಗೆ ಕಾರಣರಾದ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ರೀತ್ಯಾ ಕಟ್ಟುನಿಟ್ಟಿನ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು ಎಂದು ಸಹ ತಿಳಿಯಪಡಿಸಿದೆ.

1) ಕಟ್ಟಡ ನಕ್ಷೆ ಮಂಜೂರಾತಿ / ಪರವಾನಗಿ ಕೋರಿರುವ ನಿವೇಶನ ಪ್ರದೇಶವು ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ರಲ್ಲಿ ನಿಗಧಿಪಡಿಸಿರುವ ಭೂ ಉಪಯೋಗಕ್ಕೆ ಅನುಗುಣವಾಗಿರತಕ್ಕದ್ದು.

2) ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ರ ಪ್ರಸ್ತಾಪಿತ ಭೂ ಉಪಯೋಗ ನಕ್ಷೆಗಳಲ್ಲಿ ಕೆಲವೊಂದು ಸೂಕ್ಷ್ಮ ಪ್ರದೇಶ / ಜಾಗಗಳನ್ನು

ಗುರ್ತಿಸಿ, ಅಂತಹ ಸೂಕ್ಷ್ಮ ಪ್ರದೇಶ / ಜಾಗಗಳಲ್ಲಿ "Sensitive Zone" ಎಂದು ವರ್ಗೀಕರಿಸಲಾಗಿದೆ. ಅಂತಹ "Sensitive Zone" ಎಂದು ವರ್ಗೀಕರಿಸಿರುವ ಪ್ರದೇಶಗಳಲ್ಲಿ ಕಟ್ಟಡ ನಕ್ಷೆ ಮಂಜೂರಾತಿ / ಪರವಾನಗಿ ಕೋರಿ ಸಲ್ಲಿಸಲ್ಪಡುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ಸೂಕ್ತವಾಗಿರುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ತಜ್ಞರ ಸಮಿತಿಯು ತಾಂತ್ರಿಕವಾಗಿ ಪರಿಶೀಲಿಸಿ ನೀಡಿರುವ ನಿರಾಕ್ಷೇಪಣಾ ಪತ್ರವನ್ನು ಅರ್ಜಿದಾರರು ಹಾಜರುಪಡಿಸಿದರೆ ಮಾತ್ರ ಅನುಮೋದನೆಗೆ ಪರಿಗಣಿಸತಕ್ಕದ್ದು.

3) ಕಟ್ಟಡ ನಕ್ಷೆ ಮಂಜೂರಾತಿ / ಪರವಾನಗಿ ಕೋರಿರುವ ನಿವೇಶನ / ಪ್ರದೇಶದಲ್ಲಿ ಅಥವಾ ನಿವೇಶನ / ಪ್ರದೇಶಕ್ಕೆ ಹೊಂದಿಕೊಂಡಂತೆ, ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ರಲ್ಲಿ ಪ್ರಸ್ತಾಪಿಸಿರುವಂತೆ ಯಾವುದಾದರೂ ಪ್ರಸ್ತಾಪಿತ ರಸ್ತೆಗೆ / ರಸ್ತೆ ಅಗಲೀಕರಣಕ್ಕಾಗಿ ಉದ್ದೇಶಿಸಿದ್ದರೆ, ಅಂತಹ ರಸ್ತೆ / ರಸ್ತೆ ಅಗಲೀಕರಣದ ಜಾಗಗಳನ್ನು ನಿಗದಿಪಡಿಸಿರುವ ಅಗಲಕ್ಕನುಗುಣವಾಗಿ ಕಡ್ಡಾಯವಾಗಿ ನಕ್ಷೆಯಲ್ಲಿ ಕಾಯ್ದಿರಿಸತಕ್ಕದ್ದು ಮತ್ತು ಸದರಿ ಕಾಯ್ದಿರಿಸಲ್ಪಟ್ಟ ಜಾಗಗಳನ್ನು ಪರಿತ್ಯಾಜನಾ ಪತ್ರದ ಮೂಲಕ ಪಾಲಿಕೆಗೆ ಹಸ್ತಾಂತರಿಸಿಕೊಳ್ಳತಕ್ಕದ್ದು.

4) ಕಟ್ಟಡ ನಕ್ಷೆ ಮಂಜೂರಾತಿ / ಪರವಾನಗಿ ಕೋರಿರುವ ನಿವೇಶನ / ಪ್ರದೇಶದಲ್ಲಿ ನಕ್ಷೆ ಅನುಮೋದನೆ ನೀಡುವ ಪೂರ್ವದಲ್ಲಿ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ರ ವಲಯ ನಿಯಮಾವಳಿಗಳಲ್ಲಿ ನಮೂದಿಸಿರುವ ಅಂಶಗಳನ್ನು ಕಡ್ಡಾಯವಾಗಿ ಪರಿಗಣಿಸತಕ್ಕದ್ದು. ಸದರಿ ವಲಯ ನಿಯಮಾವಳಿಗಳ ಮುಖ್ಯ ಅಂಶಗಳನ್ನೊಳಗೊಂಡ "ನಕ್ಷೆ ಪರಿಶೀಲನಾ ಪಟ್ಟಿ" ಯನ್ನು ಸಿದ್ಧಪಡಿಸಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು, ಅದರನ್ವಯ ಕ್ರಮ ಕೈಗೊಳ್ಳಲು ಸೂಚಿಸಿದೆ.

5) ಕಟ್ಟಡ ನಕ್ಷೆ ಮಂಜೂರಾತಿ / ಪರವಾನಗಿ ಕೋರಿರುವ ನಿವೇಶನ / ಪ್ರದೇಶದಲ್ಲಿ ನಕ್ಷೆ ಅನುಮೋದನೆ ನೀಡುವ ಪೂರ್ವದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟಡ ಉಪವಿಧಿಗಳು – 2003 ರಲ್ಲಿ ನಮೂದಿಸಿರುವ ಅಂಶಗಳನ್ನು ಕಡ್ಡಾಯವಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು.

6) ಕಟ್ಟಡ ನಕ್ಷೆ ಮಂಜೂರಾತಿ / ಪರವಾನಗಿ ಕೋರಿರುವ ನಿವೇಶನ / ಪ್ರದೇಶವು ಬೆಂಗಳೂರು ಮೆಟ್ರೋ ರೈಲು ಹಾದು ಹೋಗಿರುವ ಮಾರ್ಗಕ್ಕೆ ಅಭಿಮುಖವಾಗಿದ್ದರೆ, ಬಿಎಂಆರ್‌ಸಿಎಲ್ ರವರಿಂದ ನಿರಾಕ್ಷೇಪಣಾ ಪತ್ರ ಪಡೆದ ನಂತರವೇ ಅನುಮೋದನೆಗೆ ಪರಿಗಣಿಸತಕ್ಕದ್ದು.

7) ರೈಲ್ವೇ ಹಳಿಯ ಅಕ್ಕಪಕ್ಕದಲ್ಲಿ ರೈಲ್ವೆ ಸರಹದ್ದಿನಿಂದ (Boundary) 30.00 ಮೀ. ದೂರದವರೆಗೆ ಯಾವುದೇ ರೀತಿಯ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾತಿ ನೀಡತಕ್ಕದ್ದಲ್ಲ. ಕೆಲವು ವಿಶೇಷ ಪ್ರಕರಣಗಳಲ್ಲಿ 30.00 ಮೀ. ದೂರದ ಸಡಿಲಿಕೆ ಬಗ್ಗೆ ರೈಲ್ವೇ ಇಲಾಖೆಯನ್ನು ಸಂಪರ್ಕಿಸಿ, ರೈಲ್ವೇ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಿದಲ್ಲಿ, ಅದರಂತೆ ಅನಮೋದನೆ ನೀಡಲು ಪರಿಗಣಿಸಬಹುದಾಗಿದೆ.

8) ಕೆರೆಗಳ ಸುತ್ತಲೂ ಕಂದಾಯ ದಾಖಲಾತಿಗಳನ್ವಯ ನಿಗಧಿಪಡಿಸಲಾದ ಕೆರೆಗಳ ಸರಹದ್ದಿನಿಂದ (Boundary) 30.00 ಮೀ. ದೂರದವರೆಗೆ ಯಾವುದೇ ರೀತಿಯ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾತಿ ನೀಡತಕ್ಕದ್ದಲ್ಲ. ನಿವೇಶನಕ್ಕೆ ಹೊಂದಿಕೊಂಡಂತೆ ನೀರುಗಾಲುವೆ ಇದ್ದಲ್ಲಿ, ಮುಖ್ಯ ಅಭಿಯಂತರರು (ಮಳೆನೀರುಗಾಲುವೆ) ರವರಿಂದ ಕಡ್ಡಾಯವಾಗಿ ಅಭಿಪ್ರಾಯ ಪಡೆದು, ಸದರಿಯವರು ಸೂಚಿಸುವ ಅಗತ್ಯ ಬಫರ್ ಜಾಗವನ್ನು ಕಾಯ್ದಿರಿಸಿ ನಕ್ಷೆ ಮಂಜೂರಾತಿ ನೀಡತಕ್ಕದ್ದು.

9) ಧಾರ್ಮಿಕ ಮತ್ತು ಶೈಕ್ಷಣಿಕ ಉದ್ದೇಶದ ಕಟ್ಟಡಗಳಿಗೆ ಪರವಾನಗಿ ನೀಡುವ ಪೂರ್ವದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ/237/ಬೆಮಪ್ರಾ/2009, ದಿನಾಂಕ: 19-09-2009 ರನ್ವಯ ಕ್ರಮ ಕೈಗೊಳ್ಳತಕ್ಕದ್ದು.

10) ನೆಲ + ಮೇಲಿನ 3 ಅಂತಸ್ತುಗಳಿಗಿಂತ ಹೆಚ್ಚಿನ ಎತ್ತರದ ಕಟ್ಟಡಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸ್ವಾಧೀನಾನುಭವ ಪ್ರಮಾಣಪತ್ರ ನೀಡಿದ ನಂತರವೇ "ಶಾಶ್ವತ ವಿದ್ಯುಚ್ಛಕ್ತಿ ವ್ಯವಸ್ಥೆ" ಒದಗಿಸಲು ಹಾಗೂ "ಶಾಶ್ವತ ನೀರಿನ ವ್ಯವಸ್ಥೆ" ಕಲ್ಪಿಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸತಕ್ಕದ್ದು.

11) ಅಧಿಕ ವಿದ್ಯುತ್ ಲೈನ್ (HT-Line) ಗಳ ಅಕ್ಕಪಕ್ಕದಲ್ಲಿ ಕಟ್ಟಡಗಳಿಗೆ ಪರವಾನಗಿ ನೀಡುವ ಪೂರ್ವದಲ್ಲಿ Karnataka Electricity Regulatory Commission ನಿಂದ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: KERC/RP/D/07-08 ದಿನಾಂಕ: 12-03-2008 ರಂತೆ ಕ್ರಮ ಕೈಗೊಳ್ಳತಕ್ಕದ್ದು.

12) ಎಲ್ಲಾ ಉಪ-ವಿಭಾಗೀಯ ಕಛೇರಿಗಳಲ್ಲಿ ನಕ್ಷೆ ಮಂಜೂರಾತಿ / ಪರವಾನಗಿ ನೀಡಿರುವ ವಿವರಗಳನ್ನೊಳಗೊಂಡ ವಹಿಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು. ಉಪ ವಿಭಾಗೀಯ ಕಛೇರಿಗಳಲ್ಲಿ ಅನುಮೋದಿಸಲ್ಪಡುವ ನಕ್ಷೆ ಮಂಜೂರಾತಿ / ಪರವಾನಗಿ ಪ್ರಕರಣಗಳ ಅಂಕಿ ಅಂಶಗಳನ್ನು ಪ್ರತಿ ತಿಂಗಳ ಅಂತ್ಯದಲ್ಲಿ ಆಯಾ ಸಂಬಂಧಪಟ್ಟ ವಲಯ ಕಛೇರಿಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು.

13) ಎಲ್ಲಾ ವಲಯ ಕಛೇರಿಗಳ ಮುಖ್ಯಸ್ಥರು ಅವರವರ ವ್ಯಾಪ್ತಿಯಲ್ಲಿನ ಉಪ-ವಿಭಾಗೀಯ ಕಛೇರಿಗಳಿಂದ ಸ್ವೀಕರಿಸಲ್ಪಟ್ಟ ಅಂಕಿ ಅಂಶಗಳನ್ನು ಕ್ರೋಢೀಕರಿಸುವ ಜೊತೆಗೆ, ಆಯಾ ವಲಯ ಕಛೇರಿಗಳಲ್ಲಿ ಅನುಮೋದಿಸಲ್ಪಡುವ ನಕ್ಷೆ ಮಂಜೂರಾತಿ / ಪರವಾನಗಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರಗಳನ್ನು ನೀಡಿರುವ ಪ್ರಕರಣಗಳ ಅಂಕಿ ಅಂಶಗಳನ್ನು ಪ್ರತಿ ತಿಂಗಳ ಅಂತ್ಯದಲ್ಲಿ ಪಾಲಿಕೆಯ ಕೇಂದ್ರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆಗಳು) ರವರ ಮಾಹಿತಿಗಾಗಿ
4. ಪ್ರಧಾನ ಅಭಿಯಂತರರು, ರವರ ಮಾಹಿತಿಗಾಗಿ.
5. ಅಪರ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ
6. ಅಪರ ಆಯುಕ್ತರು / ಜಂಟಿ ಆಯುಕ್ತರು (ಪೂರ್ವ / ಪಶ್ಚಿಮ / ದಕ್ಷಿಣ/ ಬೊಮ್ಮನಹಳ್ಳಿ/ ಬ್ಯಾಟರಾಯನಪುರ/ ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಮುಖ್ಯ ಅಭಿಯಂತರರು (ಪೂರ್ವ / ಪಶ್ಚಿಮ / ದಕ್ಷಿಣ / ಬೊಮ್ಮನಹಳ್ಳಿ/ ಬ್ಯಾಟರಾಯನಪುರ/ ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
9. ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ, ದಕ್ಷಿಣ ಮತ್ತು ಸ್ಕ್ವಾಡ್) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
10. ಸಹಾಯಕ ನಿರ್ದೇಶಕರು (ಪೂರ್ವ / ಪಶ್ಚಿಮ / ದಕ್ಷಿಣ / ಬೊಮ್ಮನಹಳ್ಳಿ / ಬ್ಯಾಟರಾಯನಪುರ / ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ,
11. ಎಲ್ಲಾ ಉಪ ವಿಭಾಗಗಳ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ '
12. ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು – 560 002.**

ಸಂಖ್ಯೆ: ಬಿ12(1)/ಪಿಆರ್/394./ 2012-13 ದಿನಾಂಕ: 12-03-2013

## ಕಛೇರಿ ಆದೇಶ

ವಿಷಯ: ನಕ್ಷೆ ಮಂಜೂರಾತಿ ಅಧಿಕಾರ ಪ್ರತ್ಯಾಯೋಜನೆ ಮಾಡುವ ಕುರಿತು.

ಉಲ್ಲೇಖ: 1) ಆಯುಕ್ತರವರ ನಡವಳಿ ದಿನಾಂಕ: 07-09-2012
2) ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಬಿ12(1)/ಪಿಆರ್/394/2012-13, ದಿನಾಂಕ: 01-01-2013

*******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಶಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಉಲ್ಲೇಖ (1) ದಿನಾಂಕ: 07-09-2012 ರ ನಡವಳಿಯನ್ವಯ ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರಿಗೆ ಕೇಂದ್ರ ಕಛೇರಿಯಲ್ಲಿ ನೀಡುವಂತಹ ನಕ್ಷೆ ಮಂಜೂರಾತಿ ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ, ವಲಯ ಮತ್ತು ಕೇಂದ್ರ ಕಛೇರಿಯಲ್ಲಿ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ನೀಡಿದ ನಂತರ ಪರಿವೀಕ್ಷಣೆ ಮತ್ತು ಉಸ್ತುವಾರಿ ಮಾಡುವ, ಕಟ್ಟಡಗಳಲ್ಲಿನ ಉಲ್ಲಂಘನೆಗಳಿಗೆ ಕ್ರಮ ವಹಿಸುವ ಹಾಗೂ ಆಯುಕ್ತರವರು ಸೂಚಿಸಿರುವ ಇತರೇ ಯಾವುದೇ ಕಾರ್ಯಗಳನ್ನು ನಿರ್ವಹಿಸುವುದನ್ನು ವಿವರಿಸಿ, ಇದರಿಂದಾಗಿ ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರ ಅಧೀನದಲ್ಲಿ ಎರಡು ಹೆಚ್ಚುವರಿ ಉಪ ನಿರ್ದೇಶಕರ ಹುದ್ದೆಗಳನ್ನು ಸೃಜಿಸಿ ಸದರಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ತೀರ್ಮಾನಿಸಿ ಆದೇಶಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಾತ್ಮಕ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಕಛೇರಿ ಆದೇಶ ಸಂಖ್ಯೆಳ ಬಿ12(1)/ಪಿಆರ್/433/2012-13, ದಿನಾಂಕ: 06-11-2012 ಮತ್ತು ಕಛೇರಿ ಆದೇಶ ಸಂಖ್ಯೆ: ಬಿ12(1)/ಪಿಆರ್/394/06-07/2012-13, ದಿನಾಂಕ: 07-12-2012 ಇವುಗಳನ್ನು ನಿಲಂಬನೆಗೊಳಿಸಿ ಈ ಆದೇಶಗಳಿಗಿಂತ ಮುಂಚಿತವಾಗಿ ಜಾರಿಯಲ್ಲಿದ್ದಂತಹ ನಕ್ಷೆ ಮಂಜೂರಾತಿ ಅಧಿಕಾರ ಪ್ರತ್ಯಾಯೋಜನೆಯ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವಂತೆ ಉಲ್ಲೇಖ (2) ರಲ್ಲಿ ಆದೇಶಿಸಲಾಗಿರುತ್ತದೆ.

ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ) ರವರ ಕಛೇರಿಯಲ್ಲಿ ನೀಡುವಂತಹ ನಕ್ಷೆ ಮಂಜೂರಾತಿಯ ಅನೇಕ ಪ್ರಕರಣಗಳಲ್ಲಿ ಪ್ರಾರಂಭಿಕ ಪ್ರಮಾಣಪತ್ರ ಪಡೆದ ನಂತರ ಪರಿಷ್ಕೃತ ನಕ್ಷೆ ಮಂಜೂರಾತಿಗೆ ಅರ್ಜಿಗಳು ಸ್ವೀಕರಿಸಲಾಗುತ್ತಿರುತ್ತದೆ. ಹಾಗಾಗಿ ಉಲ್ಲೇಖ (1) ರಲ್ಲಿ ಪ್ರತ್ಯಾಯೋಜಿಸಿರುವಂತೆ ಪ್ರಾರಂಭಿಕ ಪ್ರಮಾಣಪತ್ರಕ್ಕಾಗಿ ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರಿಗೆ ಮೂಲ ಕಡತ ಕಳುಹಿಸಿರುವುದನ್ನು ಪುನಃ ಹಿಂದಕ್ಕೆ ಪಡೆದ ನಂತರ ಪರಿಷ್ಕೃತ ನಕ್ಷೆ ಮಂಜೂರಾತಿ ಪ್ರಕ್ರಿಯೆಯನ್ನು ಪರಿಶೀಲಿಸಬೇಕಾಗಿರುವುದರಿಂದ, ಪರಿಷ್ಕೃತ ನಕ್ಷೆ ಮಂಜೂರಾತಿ ನೀಡುವಲ್ಲಿ ವ್ಯತ್ಯಯ ಉಂಟಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಅಲ್ಲದೇ, ಈ ಹಿಂದೆ ಇದ್ದಂತಹ ಪದ್ಧತಿಯಂತೆ ಆಯಾ ನಕ್ಷೆ ಮಂಜೂರಾತಿ ನೀಡುವ ಪ್ರಾಧಿಕಾರಗಳೇ ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಪ್ರಕ್ರಿಯೆಗಳನ್ನು ಪರಿಶೀಲಿಸಿ ಮಂಡಿಸಿದ್ದಲ್ಲಿ ಎಲ್ಲಾ ಹಂತದ ಅನುಮೋದನೆ ನೀಡುವ ಪ್ರಕ್ರಿಯೆಯಲ್ಲಿ ವ್ಯತ್ಯಯ ಉಂಟಾಗದೆ ತ್ವರಿತಗತಿಯಲ್ಲಿ ನಕ್ಷೆ ಮಂಜೂರಾತಿ ನೀಡಬಹುದಾಗಿದ್ದು, ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಯೆಂದು ಅಭಿಪ್ರಾಯಿಸಲಾಗಿದೆ.

ಮುಂದುವರೆದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಅಭಿವೃದ್ಧಿ ನಕ್ಷೆಗಳಿಗೆ ಮಂಜೂರಾತಿ ನೀಡುವ ಪ್ರಕ್ರಿಯೆಯನ್ನು ಮ್ಯಾನ್ಯುಯಲ್ ಆಗಿ ಪರಿಶೀಲಿಸಿ ಅನುಮೋದನೆ ನೀಡುವ ಪ್ರಕ್ರಿಯೆ ಪ್ರಸ್ತುತ ಜಾರಿಯಲ್ಲಿರುತ್ತದೆ. ಆದರೆ ಮ್ಯಾನ್ಯುಯಲ್ ಆಗಿ ಅನುಮೋದನೆಗೊಂಡ ಅಭಿವೃದ್ಧಿ ನಕ್ಷೆಗಳಿಗೆ ಪರವಾನಿಗೆ ನೀಡಲು ಆನ್‌ಲೈನ್ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪರಿಶೀಲಿಸಿದಾಗ ಹಲವಾರು ತಾಂತ್ರಿಕ ತೊಡಕುಗಳು ಉಂಟಾಗುತ್ತಿರುತ್ತದೆ. ಹಾಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ಎಲ್ಲಾ ಪ್ರಕ್ರಿಯೆಗಳಿಗೆ ಆನ್‌ಲೈನ್ ಮೂಲಕ ನಕ್ಷೆ ಮಂಜೂರಾತಿ ನೀಡಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದು, ವಿಳಂಬಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ವಸತಿ ಮತ್ತು ವಸತಿಯೇತರ ಕಟ್ಟಡಗಳ ಎಲ್ಲಾ ಅಭಿವೃದ್ಧಿ ಯೋಜನಾ ನಕ್ಷೆಗಳಿಗೆ ಸಂಬಂಧಿಸಿದಂತೆ ಪಾಲಿಕೆಯಲ್ಲಿ ಮಂಜೂರಾತಿ ನೀಡುವ ಪ್ರಕ್ರಿಯೆಯನ್ನು ಕೇಂದ್ರ ಕಛೇರಿಯಲ್ಲಿ ಮ್ಯಾನ್ಯುಯಲ್ ಪದ್ಧತಿಯಲ್ಲಿ ಪರಿಶೀಲಿಸಿ ಮಂಡಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ.

ಮೇಲೆ ವಿವರಿಸಿರುವ ಕಾರಣಗಳಿಂದ ವಲಯ ಕಛೇರಿಗಳಿಗೆ ನಕ್ಷೆ ಮಂಜೂರಾತಿ ನೀಡುವ ಮತ್ತು ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರಿಗೆ ಅಧಿಕಾರ ಪ್ರತ್ಯಾಯೋಜಿಸಿರುವುದನ್ನು ಮಾರ್ಪಡಿಸಿ ಪಾಲಿಕೆಯ ಆಡಳಿತಾತ್ಮಕ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಈ ಕೆಳಕಂಡಂತೆ ವಲಯ ಅಪರ / ಜಂಟಿ ಆಯುಕ್ತರು, ಅಪರ ನಿರ್ದೇಶಕರು (ನಗರ ಯೋಜನೆ) ಮತ್ತು ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿರುತ್ತೇನೆ. ಈ ಅಧಿಕಾರಗಳು ಮುಂದೆ ಪರಿಷ್ಕರಿಸುವ, ಹಿಂತೆಗೆದುಕೊಳ್ಳುವ ಮತ್ತು ಮಾರ್ಪಾಡು ಮಾಡುವವರೆವಿಗೂ ಜಾರಿಯಲ್ಲಿರುತ್ತದೆ.

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ಎಲ್ಲಾ ಅಭಿವೃದ್ಧಿ ಯೋಜನಾ ನಕ್ಷೆಗಳಿಗೆ ಮಂಜೂರಾತಿ ನೀಡುವುದನ್ನು ಹೊರತುಪಡಿಸಿ ಒಂದು ತಳ + ನೆಲ + ಮೇಲಿನ ಮೂರು ಅಂತಸ್ತುಗಳಿಗೆ (ಮೆಜನೈನ್ ಸೇರಿಸಿ) 15.00 ಮೀ. ಎತ್ತರದವರೆಗಿನ ಎಲ್ಲಾ ಉಪಯೋಗದ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ಅನುಮೋದನೆ ನೀಡುವ ಅಧಿಕಾರವನ್ನು ವಲಯ ಜಂಟಿ / ಅಪರ ಆಯುಕ್ತರವರುಗಳಿಗೆ ಪ್ರತ್ಯಾಯೋಜಿಸಲಾಗಿದೆ.

2. ಮೇಲಂತಸ್ತುಗಳನ್ನು ಲೆಕ್ಕಿಸದೇ ಎರಡು ಮತ್ತು ಎರಡಕ್ಕಿಂತ ಹೆಚ್ಚಿನ ತಳ ಅಂತಸ್ತುಗಳ ಮತ್ತು ಮೇಲಿನ ನಾಲ್ಕು ಮತ್ತು ಅದಕ್ಕಿಂತ ಹೆಚ್ಚಿನ ಅಂತಸ್ತುಗಳಿರುವ ಎಲ್ಲಾ ಉಪಯೋಗದ ಕಟ್ಟಡಗಳಿಗೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ಅಭಿವೃದ್ಧಿ ಯೋಜನಾ ನಕ್ಷೆಗಳ ಎಲ್ಲಾ ಉಪಯೋಗದ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವ ಪ್ರಕರಣಗಳಿಗೆ ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ) ರವರುಗಳು ಅಪರ ನಿರ್ದೇಶಕರು (ನಗರ ಯೋಜನೆ), ಪ್ರಧಾನ ಅಭಿಯಂತರರು ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರ ಮುಖೇನ ಮಾನ್ಯ ಆಯುಕ್ತರವರಿಗೆ ಅನುಮೋದನೆಗಾಗಿ ಮಂಡಿಸಲು ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಮುಂದುವರೆದು, ಸದರಿ ನಕ್ಷೆ ಮಂಜೂರಾತಿಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಕರಣಗಳನ್ನು ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ) ರವರು ಪರಿಶೀಲಿಸಿ ಶಿಫಾರಸ್ಸಿನೊಂದಿಗೆ ಅನುಮೋದನೆಗಾಗಿ ಅಪರ ನಿರ್ದೇಶಕರು (ನಗರ ಯೋಜನೆ) ರವರಿಗೆ ಮಂಡಿಸಲು ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

3. ವಲಯ ಮತ್ತು ಕೇಂದ್ರ ಕಛೇರಿಯಲ್ಲಿ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡಿದ ನಂತರ ಪರಿವೀಕ್ಷಣೆ ಮತ್ತು ಉಸ್ತುವಾರಿ ಮಾಡುವ, ಕಟ್ಟಡಗಳ ಉಲ್ಲಂಘನೆಗಳಿಗೆ ಕ್ರಮ ವಹಿಸುವ ಹಾಗೂ ಆಯುಕ್ತರವರು ಸೂಚಿಸುವ ಇತರೇ ಯಾವುದೇ

ಕಾರ್ಯಗಳನ್ನು ನಿರ್ವಹಿಸುವ ಅಧಿಕಾರವನ್ನು ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರಿಗೆ ಪ್ರತ್ಯಾಯೋಜಿಸಲಾಗಿದೆ.

4. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಡುವ ಅಭಿವೃದ್ಧಿ ಯೋಜನಾ ನಕ್ಷೆಗಳ ಪ್ರಕರಣಗಳ ಎಲ್ಲಾ ಉಪಯೋಗದ ಕಟ್ಟಡಗಳ ನಕ್ಷೆಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸಿ ಮ್ಯಾನ್ಯುಯಲ್ ಪದ್ಧತಿಯಲ್ಲಿ ಪರಿಶೀಲಿಸಿ ಅನುಮೋದನೆಗೆ ಮಂಡಿಸಲು ಅನುಮತಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳಲ್ಲಿ ಕ್ರಮ ಕೈಗೊಳ್ಳುವಾಗ ಸರ್ಕಾರದಿಂದ ಅನುಮೋದಿತಗೊಂಡಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ರ ವಲಯ ನಿಯಮಾವಳಿಗಳು, ಕಟ್ಟಡ ಉಪವಿಧಿಗಳು, ಕಟ್ಟಡಗಳಿಗೆ ಅನುಮೋದನೆ ನೀಡುವಾಗ ವಿಧಿಸಲಾದ ನಿಬಂಧನೆಗಳನ್ನು ಹಾಗೂ ಸಂಬಂಧಿಸಿದ ಕಾಯ್ದೆಗಳನ್ನು ಕಡ್ಡಾಯವಾಗಿ ಪಾಲಿಸಿ ನಿಯಮಾನುಸಾರ ನಿರ್ವಹಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಈ ಕ್ಷಣದಿಂದಲೇ ಜಾರಿಗೊಳಿಸಲಾಗಿದೆ.

13.3.2013

**ಆಯುಕ್ತರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ(ಎಸ್) ಪಕ್ಷದ ನಾಯಕರು ರವರುಗಳಿಗೆ ಮಾಹಿತಿಗಾಗಿ ಕಳುಹಿಸಿಕೊಡಲು ಕೋರಿದೆ.
4. ವಿಶೇಷ ಆಯುಕ್ತರು (ಯೋಜನೆಗಳು) ರವರ ಮಾಹಿತಿಗಾಗಿ.
5. ಪ್ರಧಾನ ಅಭಿಯಂತರರು, ರವರ ಮಾಹಿತಿಗಾಗಿ.
6. ಅಪರ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ
7. ಅಪರ ಆಯುಕ್ತರು / ಜಂಟಿ ಆಯುಕ್ತರು (ಪೂರ್ವ / ಪಶ್ಚಿಮ / ದಕ್ಷಿಣ)/ ಬೊಮ್ಮನಹಳ್ಳಿ/ ಬ್ಯಾಟರಾಯನಪುರ/ ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಮುಖ್ಯ ಅಭಿಯಂತರರು (ಪೂರ್ವ / ಪಶ್ಚಿಮ / ದಕ್ಷಿಣ / ಬೊಮ್ಮನಹಳ್ಳಿ / ಬ್ಯಾಟರಾಯನಪುರ / ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಕಾನೂನು ಕೋಶದ ಮುಖ್ಯಸ್ಥರವರ ಮಾಹಿತಿಗಾಗಿ
11. ಮುಖ್ಯ ಲೆಕ್ಕ ಪರಿಶೋಧಕರವರ ಮಾಹಿತಿಗಾಗಿ
12. ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಜಂಟಿ ನಿರ್ದೇಶಕರು (ನಗರ ಯೋಜನೆ – ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ಜಂಟಿ ನಿರ್ದೇಶಕರು (ನಗರ ಯೋಜನೆ – ಸ್ಕ್ವಾಡ್) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
15. ಸಲಹೆಗಾರರು (ಮಾಹಿತಿ ತಂತ್ರಜ್ಞಾನ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
16. ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆಯುಕ್ತರು ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು- 560 002

ಸಂಖ್ಯೆ:ಬಿ12(1)ಪಿಆರ್/394/12-13 ದಿನಾಂಕ: 01.01.2013

# ಕಛೇರಿ ಆದೇಶ

ವಿಷಯ:- ನಕ್ಷೆ ಮಂಜೂರಾತಿ ಅಧಿಕಾರ ಪ್ರತ್ಯಾಯೋಜನೆ ಮಾಡುವ ಬಗ್ಗೆ.

ಉಲ್ಲೇಖ:- 1. ಆಯುಕ್ತರವರ ಕಛೇರಿ ಪತ್ರ ಸಂಖ್ಯೆ: ಬಿ12(1)ಪಿಆರ್/394/06-07 ದಿನಾಂಕ: 21.02.2007.
2. ಆಯುಕ್ತರವರ ಕಛೇರಿ ಪತ್ರ ಸಂಖ್ಯೆ: ಜೆಡಿಟಿಪಿ(ದ)ಜಿಎಲ್.ಹೆನಿ/29/ 2009-10 ದಿನಾಂಕ: 26.12.2009.
3. ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಬಿ12(6)ಪಿಆರ್/433/2012-13 ದಿನಾಂಕ: 06.11.2012.
4. ಆಯುಕ್ತರವರ ಕಛೇರಿ ಪತ್ರ ಸಂಖ್ಯೆ: ಬಿ12(1)ಪಿಆರ್/394/06-07/ 2012-13 ದಿನಾಂಕ: 07.12.2012.
5. ಕಛೇರಿ ಆದೇಶ ಸಂಖ್ಯೆ: ಹೆನಿನಯೋ/ಜಿಎಲ್/1564/11-12 ದಿನಾಂಕ: 29.02.2012.

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನಾ ಇಲಾಖೆಯ ಕೆಲಸ ಕಾರ್ಯಗಳ ದೃಷ್ಟಿಯಿಂದ ಉಲ್ಲೇಖ (1) ದಿನಾಂಕ: 21.02.2007 ರನ್ವಯ ವಲಯ ಜಂಟಿ/ ಅಪರ ಆಯುಕ್ತರುಗಳಿಗೆ ತಳ ಅಂತಸ್ತು, ನೆಲ ಅಂತಸ್ತು ಮತ್ತು ಮೇಲಿನ ಮೂರು ಅಂತಸ್ತುಗಳವರೆಗಿನ ಎಲ್ಲಾ ವಸತಿ ಕಟ್ಟಡಗಳ ಪರವಾನಗಿಯ ಹಾಗೂ ತಳ, ನೆಲ ಮತ್ತು ಮೇಲಿನ ಮೂರು ಅಂತಸ್ಥಿನವರಿಗೆ ವಸತಿಯೇತರ ಕಟ್ಟಡಗಳಿಗೆ ಕಟ್ಟಡ ಪರವಾನಗಿ ನೀಡುವ ಅಧಿಕಾರ ಮತ್ತು ಪ್ರಾರಂಭಿಕ ಪ್ರಮಾಣ ಪತ್ರ ಪ್ರಕರಣಗಳನ್ನು ಅನುಮೋದನೆ ನೀಡುವ ಅಧಿಕಾರ ನೀಡಲಾಗಿತ್ತು.

ಉಲ್ಲೇಖ (2) ದಿನಾಂಕ: 26.12.2009 ರಂತೆ ವಲಯ ಕಛೇರಿ ವ್ಯಾಪ್ತಿಯಲ್ಲಿ ಅನುಮೋದನೆಗೊಂಡ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ಸಂಬಂಧಪಟ್ಟ ವಲಯಗಳ ಅಪರ/ ಜಂಟಿ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿರುತ್ತದೆ.

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ: ಹೆನಿನಯೋ/ಜಿಎಲ್/1580/10-11 ದಿನಾಂಕ: 21.03.2011 ರ ಆದೇಶದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿನ ಕಟ್ಟಡ ನಕ್ಷೆ ಮಂಜೂರಾತಿಯನ್ನು ಅಂತರ್ಜಾಲ ತಂತ್ರಾಂಶ ಹಾಗೂ Auto DCR Software ಮೂಲಕ ತ್ವರಿತವಾಗಿ ಅನುಮೋದಿಸುವಂತೆ ಆದೇಶಿಸಿರುತ್ತದೆ.

ಉಲ್ಲೇಖ (3) ದಿನಾಂಕ: 06.11.2012 ರ ಆದೇಶದಂತೆ ವಲಯ ನಗರ ಯೋಜನಾ ವಿಭಾಗಗಳಲ್ಲಿರುವ ಸಹಾಯಕ ನಿರ್ದೇಶಕರು ನಗರ ಯೋಜನೆ ರವರ ಹುದ್ದೆಗಳನ್ನು ರದ್ದುಗೊಳಿಸಿ ಆಯಾ ವಲಯ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರುಗಳಿಗೆ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೆಲಸಗಳೊಂದಿಗೆ ನಗರ ಯೋಜನಾ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಆದೇಶಿಸಿರುತ್ತದೆ.

ಉಲ್ಲೇಖ (4) ದಿನಾಂಕ: 07.12.2012 ರ ಆದೇಶದಂತೆ ಉಲ್ಲೇಖ (1) ಮತ್ತು (2) ರಲ್ಲಿ ಪ್ರತ್ಯಾಯೋಜಿಸಲಾಗಿದ್ದ ಆದೇಶಗಳನ್ನು ಮಾರ್ಪಡಿಸಿ 4000 ಚ.ಮೀ ವಿಸ್ತೀರ್ಣದ ವರೆಗಿನ ಸ್ವತ್ತುಗಳಿಗೆ ಮಾತ್ರ ಒಂದು ತಳ ನೆಲ ಮತ್ತು ಮೇಲಿನ 3 ಅಂತಸ್ತುಗಳಿಗೆ (ಮೈಜನೈನ್ ಸೇರಿಸಿ) ಸೀಮಿತಗೊಳಿಸಿ 15 ಮೀ ಎತ್ತರವರೆಗಿನ ಎಲ್ಲಾ

ಉಪಯೋಗದ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಪ್ರಕರಣಗಳಿಗೆ ಆಯಾ ಉಪವಿಭಾಗ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರುಗಳು, ಕಾರ್ಯಪಾಲಕ ಅಭಿಯಂತರರು/ ವಲಯ ಮುಖ್ಯ ಅಭಿಯಂತರವರುಗಳ ಮುಖೇನ ಅನುಮೋದನೆಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಮತ್ತು ಸದರಿ ಪ್ರಕರಣಗಳಲ್ಲಿ ಅನುಮೋದನೆ ನೀಡುವ ಅಧಿಕಾರವನ್ನು ಜಂಟಿ/ ಅಪರ ವಲಯ ಆಯುಕ್ತರವರುಗಳಿಗೆ ಪ್ರತ್ಯಾಯೋಜಿಸಲಾಗಿತ್ತು.

ಸುವರ್ಣ ಪರವಾನಗಿ-ಗೃಹ ನಕ್ಷೆ ಯೋಜನೆಯ ಅಡಿಯಲ್ಲಿ 4000 ಚ.ಅಡಿ. ಯವರೆವಿಗೂ ಸಹಾಯಕ ನಿರ್ದೇಶಕರು (ನಗರ ಯೋಜನೆ) ರವರುಗಳಿಗೆ ಅಧಿಕಾರ ಪ್ರತ್ಯಾಯೋಜನೆ ನೀಡಲಾಗಿದ್ದು, ಈ ಅಧಿಕಾರ ಪ್ರತ್ಯಾಯೋಜನೆಯಡಿಯಲ್ಲಿ 2400 ಚ.ಅ. ಏಕ ವಾಸ ಘಟಕ ಕಟ್ಟಡಗಳಿಗೆ ಹಳೇ ಪದ್ಧತಿ (Manual) ಮೂಲಕ ಪರವಾನಗಿ ನೀಡಲು ಅಧಿಕಾರವನ್ನು ಪೂರ್ಣವಾಗಿ ಸಂಬಂಧಪಟ್ಟ ಉಪ-ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ರವರಿಗೆ ಪ್ರತ್ಯಾಯೋಜಿಸಲಾಗಿದೆ. ಉಳಿದಂತೆ ಸುವರ್ಣ ಪರವಾನಗಿ – ಗೃಹ ನಕ್ಷೆ ಯೋಜನೆಯ ಅಡಿಯಲ್ಲಿ 4000 ಚ.ಅ. ಯವರೆವಿಗೂ ಸಹಾಯಕ ನಿರ್ದೇಶಕರು (ನಗರ ಯೋಜನೆ) ರವರುಗಳು ಅಂತರ್ಜಾಲ ತಂತ್ರಾಂಶದ ಮೂಲಕವೇ ಪರವಾನಗಿ ನೀಡುವ ಅಧಿಕಾರವನ್ನು ಮುಂದುವರೆಸಲಾಗಿದೆ.

ಆದರೆ ಈ ಮೇಲ್ಕಂಡ ಉಲ್ಲೇಖ (3) ಮತ್ತು (4) ರ ಆದೇಶಗಳಂತೆ ನಗರ ಯೋಜನೆ ಕೆಲಸ ಕಾರ್ಯಗಳ ಕೇಂದ್ರೀಕರಣದಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದಾಗಿ ಹಾಗೂ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರು ಸದರಿ ಕೇಂದ್ರಿಕರಣಗೊಳಿಸಿದ ಸುತ್ತೋಲೆಗಳನ್ನು ರದ್ದುಪಡಿಸಿ ಸದರಿ ಸುತ್ತೋಲೆಗಳಗಿಂತ ಮೊದಲು ಇದ್ದಂತಹ ಸುತ್ತೋಲೆಗಳನ್ವಯ ವಲಯಗಳಲ್ಲಿ ಎ.ಡಿ.ಟಿ.ಪಿ ಶಾಖೆಗಳನ್ನು ನಗರ ಯೋಜನಾ ಶಾಖೆಗಳನ್ನು ಮುಂದುವರೆಸಿ ಈ ಮೊದಲು ಇದ್ದಂತಹ ವಿಕೇಂದ್ರಿಕರಣ ಪದ್ಧತಿಯನ್ನು ಸಾರ್ವಜನಿಕ ಉದ್ದೇಶದಿಂದ ಮುಂದುವರೆಸುವಂತೆ ಕೋರಿರುತ್ತಾರೆ. ಈ ಕಾರಣಗಳಿಂದಾಗಿ ಬಿಬಿಎಂಪಿ ಆಡಳಿತಾತ್ಮಕ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಮೇಲ್ಕಂಡ ಉಲ್ಲೇಖ (3) ಮತ್ತು (4) ರಲ್ಲಿ ಪ್ರತ್ಯಾಯೋಜಿಸಲಾಗಿದ್ದ ಆದೇಶಗಳನ್ನು ನಿಲಂಬನೆಗೊಳಿಸಿ ಈ ಆದೇಶಗಳಗಿಂತ ಮುಂಚಿತವಾಗಿದ್ದ ಜಾರಿಯಲ್ಲಿದ್ದಂತಹ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವಂತೆ ಆದೇಶಿಸಲಾಗಿದೆ.

11.1.2013

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ಪ್ರತಿಯನ್ನು: ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
: ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ) ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಅಪರ ಆಯುಕ್ತರು (ಆಡಳಿತ)/ ಎಲ್ಲಾ ವಲಯಗಳ ಅಪರ / ಜಂಟಿ ಆಯುಕ್ತರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
: ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.
: ಪ್ರಧಾನ ಅಭಿಯಂತರರು ರವರಿಗೆ ಕಳುಹಿಸಿದೆ.
: ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಕಳುಹಿಸಿದೆ.
: ಅಪರ ನಿರ್ದೇಶಕರು (ನಗರ ಯೋಜನೆ) ರವರಿಗೆ ಕಳುಹಿಸಿದೆ.
: ಜಂಟಿ ನಿರ್ದೇಶಕರು (ನಗರ ಯೋಜನೆ –ಕೇಂದ್ರ/ ಉತ್ತರ-ದಕ್ಷಿಣ) ರವರಿಗೆ ಕಳುಹಿಸಿದೆ.
: ಎಲ್ಲಾ ವಲಯಗಳ ಸಹಾಯಕ ನಿರ್ದೇಶಕರು (ನಗರ ಯೋಜನೆ) ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ / ಕಿರಿಯ ಅಭಿಯಂತರರುಗಳಿಗೆ ಕಳುಹಿಸಿದೆ.
: ಮುಲೆಅ/ಮುಲೆಪರವರಿಗೆ ಉ.ನಿ (ಹಣಕಾಸು-ಕೇಂದ್ರ) ರವರಿಗೆ ಕಳುಹಿಸಿದೆ,
: ಎಲ್ಲಾ ವಲಯಗಳ ಸ.ನಿ (ಹಣಕಾಸು) ರವರಿಗೆ ಕಳುಹಿಸಿದೆ.